ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ 14ನೇ ಸೆಪ್ಟೆಂಬರ್ 1995ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

ಶ್ರೀ ವಾಸುದೇವನ್ ಪ್ರಕರಣದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ವಾಸುದೇವನ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವೊಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೆವು. ಪ್ರಶ್ನೋತ್ತರವನ್ನು ಬಿಡಿಗಿಡಿ ಎಂದು ನಾನು ಹೇಳುವುದಿಲ್ಲ. ಹಿಂದೆ ಅನೇಕ ಬಾರಿ ಪ್ರಮುಖ ವಿಷಯಗಳು ಪ್ರಸ್ತಾಪವಾದಾಗ ಮೊದಲು ಚರ್ಚೆಗೆ ಅವಕಾಶ ಮಾಡಿ ಕೊಟ್ಟು, ಅನಂತರ ಪ್ರಶ್ನೋತ್ತರವನ್ನು ಕೈಗೆತ್ತಿಕೊಂಡಂಥಾದ್ದು ತಮ್ಮ ಕಾಲದಲ್ಲೇ ಒಂದೆರಡು ಬಾರಿ ನಡೆದಿದೆ. ಇದೊಂದು ವಿಶೇಷ ಸಂದರ್ಭವಾಗಿರುವುದರಿಂದ, ನಾವು ಈಗಾಗಲೇ ಸದರಿ ವಿಷಯ ಪ್ರಸ್ತಾಪಿಸಲು ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿರುವುದರಿಂದ, ತಾವು ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕು. ಇವತ್ತು ವಾಸುದೇವನ್ ಅವರು ಜೈಲಿನೊಳಗೆ ಇರುವಂತಹ ಸಂದರ್ಭ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು 3-4 ದಿನಗಳಿಂದ ಇಲ್ಲಿಲ್ಲ.

ಅಧ್ಯಕ್ಷರು : ಶ್ರೀ ವಕ್ವಾಡಿ ಶ್ರೀನಿವಾಸ ಶೆಟ್ಟಿಯವರು ನಿಧನರಾಗಿರುವ ಬಗ್ಗೆ ಒಂದು ಸಂತಾಪ ಸೂಚನೆಯನ್ನು ಸದನದಲ್ಲಿ ಮಂಡಿಸಬೇಕಾಗಿದೆ. ಮೊದಲು ಅದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ವಾಸುದೇವನ್ ಪ್ರಕರಣದ ಬಗ್ಗೆ ನಾನೂ ಕೂಡ ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೇನೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಖರ್ಗೆಯವರೂ ಕೂಡ ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲರಿಗಿಂತಲೂ ಮುಂಚೆಯೇ, ಅಂದರೆ ನಿನ್ನೆ 5.00 ಗಂಟೆಗೇ ನಾನು ಸದರಿ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿಯ ಒಂದು ಸಂದರ್ಭ ಇರುವುದರಿಂದ, ಮೊದಲು ಯಾವ ಕಲಾಪವನ್ನು ಕೈಗೆತ್ತಿಕೊಳ್ಳಬೇಕು ಎನ್ನುವುದನ್ನು ತಾವೇ ನಿರ್ಧರಿಸಿ.